ಅದು 80ರ ದಶಕ. ಹಳ್ಳಿ ಮನೆಗಳಿಗಿನ್ನೂ ಟೀವಿ ಬಂದಿರಲೇ ಇಲ್ಲ. ಬೇಸಗೆಯ ರಜೆ ಎಂದಾಕ್ಷಣ ನೆನಪಾಗುತ್ತಿದ್ದುದು ಹಳ್ಳಿಯ ಅಜ್ಜಿಯ ಮನೆ ಮತ್ತು ಅಲ್ಲಿನ 'ರಾಘವೇಂದ್ರ ಟೂರಿಂಗ್ ಟಾಕೀಸ್'. ಟಾಕೀಸು ನಮ್ಮ ದಾಯಾದಿ ಸೋದರಮಾವನದ್ದೇ ಆಗಿದ್ದುದರಿಂದ ಅದು ನಮ್ಮದೂ ಆಗಿತ್ತು. ಯಾವ ಸಿನಿಮಾವನ್ನು ಎಷ್ಟು ಸಲ ಬೇಕಾದರೂ ಫ್ರೀಯಾಗಿ ನೋಡುವ ಅವಕಾಶವಿತ್ತು.

ಹೆಚ್ಚಾಗಿ ರೈತರೇ ಇದ್ದ ಅಜ್ಜಿಯ ಊರಿನಲ್ಲಿ ಸುಮಾರು ಸಾವಿರದ ಐದುನೂರು ಮನೆಗಳಿದ್ದವು. ಅವರಿಗಿದ್ದ ಮನರಂಜನೆಯ ಏಕೈಕ ಜಾಗ ನಮ್ಮ ಟೂರಿಂಗ್ ಟಾಕೀಸು. ನಾವೇ ಓನರ್ ಆಗಿದ್ದುದರಿಂದ ನಮಗೆ ಪ್ರೊಜೆಕ್ಟರ್ ರೂಂಗೆ ಮುಕ್ತ ಪ್ರವೇಶವಿತ್ತು. ಆಪರೇಟರ್ ವೀರಭದ್ರನಿಗೆ ಪೇಟೆಯಲ್ಲಿ ಓದುತ್ತಿದ್ದ ನಮ್ಮನ್ನು ಕಂಡರೆ ಪ್ರೀತಿಯಿತ್ತು. ಸಿನಿಮಾ ತೋರಿಸುವ ತನ್ನ ಸಾಹಸದ ಕಥೆಗಳನ್ನು ನಮ್ಮ ಮುಂದೆ ಹೇಳುತ್ತಾ, ಸ್ಲೈಡ್ ತಯಾರಿಸುವುದು ಹೇಗೆ, ಅದನ್ನು ತೋರಿಸುವುದು, ಪ್ರೊಜೆಕ್ಟರ್‌ಗೆ ರೀಲ್ ಸಿಗಿಸುವುದು, ರೀಲ್ ಕಟ್ಟಾದರೆ ಹೇಗೆ ಅಂಟಿಸುವುದು ಎಂಬುದನ್ನು ತೋರಿಸುತ್ತಿದ್ದ. ಅವನು ಹೇಳುವ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಂಡು ಸಿನಿಮಾ ಮುಗಿಯುವವರೆಗೂ ಅಲ್ಲೇ ಇರುತ್ತಿದ್ದೆವು. ಟಾಕೀಸ್‌ನಲ್ಲಿ ಒಟ್ಟು ಐದುನೂರು ಜನರಿಗೆ ಅವಕಾಶವಿತ್ತು. ದಿನಕ್ಕೆ ಒಂದು ಶೋ. ಅದೂ ರಾತ್ರಿ ಹತ್ತರ ನಂತರ. 'ನಂತರ' ಎಂಬುದು ಏಕೆ ಎಂದು ಮುಂದೆ ಹೇಳುತ್ತೇನೆ.

ಆಗೆಲ್ಲಾ ಸಿನಿಮಾ ರೀಲ್ ಫಾರ್ಮ್ಯಾಟ್‌ನಲ್ಲಿರುತ್ತಿತ್ತು ಮತ್ತು ಹಂಚಿಕೆದಾರರ ಕಚೇರಿಗಳಿಂದ ಬಾಕ್ಸ್‌ನಲ್ಲಿ ಊರಿಂದೂರಿಗೆ ರವಾನೆಯಾಗುತ್ತಿತ್ತು. ಸುಗ್ಗಿಯ ಕಾಲದಲ್ಲಂತೂ ರಾಜ್‌ಕುಮಾರ್ ಅಭಿನಯದ ಕಲರ್ ಸಿನಿಮಾಗಳದ್ದೇ ದರ್ಬಾರು. ಶೇಂಗಾ ಸುಗ್ಗಿಯಲ್ಲಿ ಪ್ರದರ್ಶನಗೊಳ್ಳುತ್ತಿದ್ದ ರಾಜ್ ಚಿತ್ರಗಳಾದ 'ಗಿರಿಕನ್ಯೆ', 'ಬಡವರ ಬಂಧು', 'ಸಿಪಾಯಿ ರಾಮು', 'ಬಂಗಾರದ ಮನುಷ್ಯ' ಇವೆಲ್ಲ ಒಂದೊಂದು ತಿಂಗಳು ಓಡುತ್ತಿದ್ದವು. ಶನಿವಾರ ಮತ್ತು ಭಾನುವಾರ ಎರಡು ಶೋ ಇರುತ್ತಿದ್ದವು. ರಾಜ್‌ಕುಮಾರ್ ಸಿನಿಮಾದ ಬಾಕ್ಸ್‌ಗಳನ್ನು ಬಸ್ಸಿನಿಂದಳಿಸಿ ಹಳ್ಳಿಯ ಮುಖ್ಯ ಬೀದಿಗಳಲ್ಲಿ ಟ್ರಾಕ್ಟರ್‌ನಲ್ಲಿ ಮೆರವಣಿಗೆ ಮಾಡಿ ಟಾಕೀಸಿಗೆ ತರಲಾಗುತ್ತಿತ್ತು. ಬಾಕ್ಸ್‌ನಲ್ಲಿ ನಾಲ್ಕು ವೃತ್ತಾಕಾರಾದ ಸ್ಪೂಲ್‌ಗಳಿರುತ್ತಿದ್ದವು. ಒಂದೊಂದು ಸ್ಪೂಲ್‌ನಲ್ಲೂ ನಲವತ್ತು ನಿಮಿಷದ ಸಿನಿಮಾ ರೀಲ್ ಇರುತ್ತಿತ್ತು. 16 ರೀಲ್ ಸಿನಿಮಾ ಆದರೆ ನಾಲ್ಕು ಸ್ಪೂಲ್ ಕಾಯಂ. ಪ್ರತೀ ಸ್ಪೂಲ್‌ಗೂ ಒಂದು, ಎರಡು ಎಂದು ನಾಲ್ಕರವರೆಗೆ ನಂಬರ್ ಇರುತ್ತಿತ್ತು. ನಂಬರ್ '1' ಎಂದಿದ್ದರೆ ಅದು ಸಿನಿಮಾ ಆರಂಭದ ರೀಲ್ ಎಂದರ್ಥ.

'ಅಚ್ಚ ಹೊಸಪ್ರಿಂಟ್' ಎಂದು ಲೇಬಲ್ ಹೊಂದಿರುತ್ತಿದ್ದ ಅಲ್ಯೂಮಿನಿಯಂ ಬಾಕ್ಸ್ ಚಿತ್ರದುರ್ಗ ಇಲ್ಲವೇ ಕಂಪ್ಲಿಯಿಂದ ಬರುತ್ತಿತ್ತು. ರಾಜ್‌ಕುಮಾರ್ ಸಿನಿಮಾಗಳಿಗೆ ಆಗಿನ ಕಾಲಕ್ಕೇ ವಾರಕ್ಕೆ 30ರಿಂದ 40 ಸಾವಿರ ರೂಪಾಯಿ ಖರ್ಚಾಗುತ್ತಿತ್ತು. ಅದನ್ನು ಭರಿಸುವ ಶಕ್ತಿ ಇಲ್ಲದ ಟೂರಿಂಗ್ ಟಾಕೀಸಿನವರು ಹತ್ತಿರದ ತಾಲ್ಲೂಕು ಕೇಂದ್ರದಿಂದ ಅಲ್ಲಿನ ಎಲ್ಲಾ ಶೋಗಳು ಮುಗಿದ ಮೇಲೆ ದಿನದ ಬಾಡಿಗೆಯ ಲೆಕ್ಕದಲ್ಲಿ ತಂದು ಪ್ರದರ್ಶಿಸಿ ಸ್ವಲ್ಪ ಹಣ ಮಾಡಿಕೊಳ್ಳುತ್ತಿದ್ದರು.

ಹರಿಹರ ನಮ್ಮ ಹಳ್ಳಿ ಹಲುವಾಗಲಿಗೆ ಅತೀ ಹತ್ತಿರದಲ್ಲಿದ್ದ ಊರು. ಹರಿಹರ ತಾಲ್ಲೂಕು ಕೇಂದ್ರವಾಗಿದ್ದು ಅಲ್ಲಿನ ಟಾಕೀಸ್‌ಗಳು ಬಾಂಬೆ–ಕರ್ನಾಟಕ ಹಂಚಿಕೆ ವಿಭಾಗಕ್ಕೆ ಬರುತ್ತಿದ್ದುದರಿಂದ, ಅಲ್ಲಿನ ಥಿಯೇಟರ್‌ಗಳಲ್ಲಿ ಹೊಸ ಸಿನಿಮಾಗಳು ನೇರ ರಿಲೀಸ್ ಅಗುತ್ತಿದ್ದವು. ಹಾಗೆಯೇ ಅಲ್ಲಿ ರಾಜ್ ಅಭಿನಯದ 'ಮಯೂರ' ರೀರಿಲೀಸ್ ಆಗಿ ಒಂದು ತಿಂಗಳಾಗಿತ್ತು. ದಿನಕ್ಕೆ ನಾಲ್ಕು ಆಟಗಳು. ಅಲ್ಲಿನ ಸೆಕೆಂಡ್ ಶೋ ರಾತ್ರಿ 9ಕ್ಕೆ ಶುರುವಾಗುತ್ತಿತ್ತು. ಮೊದಲ ನಲವತ್ತು ನಿಮಿಷಗಳಿಗೆ ಸಿನಿಮಾದ ಮೊದಲ ನಾಲ್ಕು ರೀಲ್ ಮುಗಿದಿರುತ್ತಿದ್ದವು. ಅಲ್ಲಿಂದ ಆಟೋದಲ್ಲಿ ಹೊರಟು ನಮ್ಮ ಹಳ್ಳಿಗೆ ಒಳಹಾದಿಯಲ್ಲಿ ಕೇವಲ ಅರ್ಧ ಗಂಟೆಯಲ್ಲಿ 20 ಕಿ.ಮೀ. ಕ್ರಮಿಸಿ ನಮ್ಮ ಟಾಕೀಸ್ ತಲುಪುತ್ತಿದ್ದವು. ನಂತರ ಹತ್ತೂವರೆಯ ವೇಳೆಗೆ ಅಲ್ಲಿಂದ ಎರಡನೇ ಸ್ಪೂಲ್ ಹೊರಟು ನಮ್ಮಲ್ಲಿಗೆ ಬರುತ್ತಿತ್ತು. ಇಲ್ಲಿ ಎರಡು ಸ್ಪೂಲ್ ಮುಗಿಯುವ ವೇಳೆಗೆ ಹರಿಹರದಲ್ಲಿ ಸಿನಿಮಾನೇ ಮುಗಿದು ಕೊನೆಯ ರೀಲ್‌ಗಳು ಅಲ್ಲಿಂದ ಹೊರಟು ಬರುತ್ತಿದ್ದವು. ಇದು ಟೂರಿಂಗ್ ಟಾಕೀಸಿನವರು ನಗರದ ಟಾಕೀಸುಗಳ ಮಾಲೀಕರ ಬಳಿ ಮಾಡಿಕೊಳ್ಳುವ ಒಳ ಒಪ್ಪಂದದಂತೆ ನಡೆಯುತ್ತಿತ್ತು. ನನ್ನ ಸೋದರಮಾವನೂ ಸಹ ದಿನಬಾಡಿಗೆಯ ಲೆಕ್ಕದಲ್ಲಿ ಸಿನಿಮಾ ತಂದು, ಪ್ರದರ್ಶಿಸಿ ಮರುದಿನ ಬೆಳಗ್ಗೆ ಹೊತ್ತಿಗೆ ಹಿಂತಿರುಗಿಸಿ ಮತ್ತೆ ರಾತ್ರಿ ತಂದು ಪ್ರದರ್ಶಿಸುತ್ತಿದ್ದ.

ಒಂದು ದಿನ ಹೀಗೆಯೇ 'ಮಯೂರ' ಸಿನಿಮಾ ಹಾಕುವುದೆಂದು ತೀರ್ಮಾನಿಸಿ ಊರಲ್ಲೆಲ್ಲಾ ಭರ್ಜರಿ ಪ್ರಚಾರ ನಡೆಸಿದ್ದರು. ರಾತ್ರಿ ಹತ್ತೂ ಕಾಲಿಗೆ ಶೋ ಪ್ರಾರಂಭವಾಯಿತು. ಇಂಟರ್‌ವಲ್‌ಗೆ ಮುಂಚೆ ಎರಡು ಸ್ಪೂಲ್‌ಗಳು ಬಂದು ಸಿನಿಮಾ ಸರಿಯಾಗಿ ನಡೆಯಿತು. ಇಂಟರ್‌ವಲ್ 15 ನಿಮಿಷಗಳ ಅವಧಿಯದು. ಆದು ಮುಗಿಯಿತು. ವೀರಭದ್ರ 'ಮುಂದಿನ ಬದಲಾವಣೆ' ಎಂದು ಎರಡು ಮೂರು ಸಿನಿಮಾಗಳ ಕಲರ್ ಸ್ಲೈಡ್ ಹಾಕಿ ಹತ್ತು ನಿಮಿಷ ಟೈಂ ಪಾಸ್ ಮಾಡಿದ. ಆಗಲೂ ಆಟೋದ ಸುಳಿವಿಲ್ಲ. ಹರಿಹರದಿಂದ ಹೊರಟ ಆಟೊ ಬರಲೇ ಇಲ್ಲ. ಇಲ್ಲಿ ತಳಮಳ ಶುರುವಾಯಿತು. ಈಗಿನಂತೆ ಮೊಬೈಲ್ ಇರಲಿಲ್ಲ. ಲ್ಯಾಂಡ್‌ಲೈನ್‌ನಿಂದ ಫೋನ್‌ಮಾಡಿ ವಿಚಾರಿಸಿದಾಗ

